ವಿಷಯ : ಹುಣಸೂರು ತಾಲ್ಲೂಕು ಹನಗೋಡು ಹೋಬಳಿಯಲ್ಲಿ ನಡೆದಿರುವ ಕೊಲೆ ಬಗ್ಗೆ.

*ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ, ಹುಣಸೂರು ತಾಲ್ಲೂಕಿನ ಹನಗೋಡ ಹೋಬಳಿ ಜೀರನಹಳ್ಳಿ ಗ್ರಾಮದಲ್ಲಿ ರಾಜಪ್ಪ ಎನ್ನತಕ್ಕಂಥವರ ಮಗಳು ಭಾಗ್ಯ ಎನ್ನುವವಳು 3.3.93ರಲ್ಲಿ ಕಾಣೆಯಾಗಿ 1.4.93ರಂದು ಸುಮಾರು ನಾಲ್ಕು ಗಂಟೆ ಸಮಯದಲ್ಲಿ ಹಿರೇಹಳ್ಳಿ ಲಕ್ಷ್ಮಣತೀರ್ಥ ನದಿಯಲ್ಲಿ ಆಕೆಯ ಶವ ಪತ್ತೆಯಾಯಿತು. ಇದು ಕೊಲೆ ಎಂದು ಹೇಳಿ ಈ ಬಗ್ಗೆ ಅಲ್ಲಿನ ಪೋಲೀಸ್ ಸ್ಟೇಷನ್‌ಗೆ ಮಗಳ ತಂದೆಯವರು ದೂರು ಕೊಟ್ಟಿದ್ದಾರೆ. ಆದರೆ ಇದುವರೆಗೂ ಇದಕ್ಕೆ ಸಂಬಂಧಪಟ್ಟ ಹಾಗೆ ಯಾರನ್ನೂ ಬಂಧಿಸಿಲ್ಲ. ಇದು ಬಹಳ ಗಹನವಾದ ವಿಚಾರ ಇದೆ. ಇದನ್ನು ಸರ್ಕಾರ ನೇರವಾಗಿ ಸಿ.ಓ.ಡಿ.ಗೆ ಕಳುಹಿಸಿಕೊಡಬೇಕು. ಇದು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನಲ್ಲಿ ನಡೆದಿರತಕ್ಕಂಥಾದ್ದು, ಇದರಿಂದ ಇಡೀ ಮೈಸೂರು ಜಿಲ್ಲೆಯಲ್ಲಿ ಒಂದು ರೀತಿಯ ಅಶಾಂತ ವಾತಾವರಣ, ಭೀತಿಯ ವಾತಾವರಣ ನಿರ್ಮಾಣವಾಗಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಅಲ್ಲಿನ ಪೋಲೀಸ್ ಅಧಿಕಾರಿಗಳು ಯಾರಿದ್ದಾರೆ, ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಇದು ಬಹಳ ಮುಖ್ಯವಾದದ್ದು. ಈ ಹುಡುಗಿಯ ಮೈ ಮೇಲೆ ಗಾಯಗಳಾಗಿವೆ, ಅವಳ ಕಾಲುಗಳನ್ನು ಮುರಿದಿದ್ದಾರೆ. ಇದರ ಬಗ್ಗೆ ವೈದ್ಯರಿಂದ ವರದಿ ಬಂದಿದೆ. ಇಷ್ಟೆಲ್ಲ ನಡೆದರೂ ಕೂಡ ಈ ಬಗ್ಗೆ ಸಮಗ್ರವಾದಂಥ ತನಿಖೆ ಇದುವರೆಗೂ ಆಗಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಹೌಸ್ ಆರ್ಡರ್‌ನಲ್ಲಿ ಬರಲಿ.

ಅಧ್ಯಕ್ಷರು : ಸದಸ್ಯರು ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ಕೊಲೆ ಬಗ್ಗೆ ಸಮಗ್ರವಾದಂಥ ಒಂದು ತನಿಖೆ ಇದುವರೆಗೂ ಆಗಿಲ್ಲ ಮತ್ತು ಸಂಬಂಧಪಟ್ಟವರನ್ನು ಇದುವರೆಗೂ ಬಂಧಿಸಿಲ್ಲ. ಇದರ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಮುಖ್ಯಮಂತ್ರಿಗಳು ಈ ಬಗ್ಗೆ ಗಮನಹರಿಸಬೇಕು. ಮೈಸೂರು ಜಿಲ್ಲೆಯಲ್ಲಿ ನಡೆಯಬಾರದ್ದು ನಡೆದಿದೆ. ಇದು ಜನತೆಯ ಮೇಲೆ ಘೋರ ಪರಿಣಾಮವನ್ನು ಬೀರುತ್ತದೆ. ಇದರಿಂದ ಬಹಳ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ಒಂದೇ ಅಲ್ಲ, ಈ ಹಿಂದೆ ಕೂಡ ತಮ್ಮ ಗಮನಕ್ಕೆ ತಂದಿದ್ದೆ. ಇದರ ಜೊತೆಗೆ ಚಾಮರಾಜನಗರ ತಾಲ್ಲೂಕು, ನಾಗಹಳ್ಳಿ ಗ್ರಾಮದ ಉಪ್ಪಾದ ಜನಾಂಗದ ಮಹದೇವಶೆಟ್ಟಿಯು ಸತ್ತಿದ್ದು; ಇವತ್ತಿನವರೆಗೂ ಅವನ ಸಾವಿಗೆ ಕಾರಣವೇನು ಎಂಬುದು ತಿಳಿದಿಲ್ಲ. ಯಾರನ್ನೂ ಬಂಧಿಸಲಿಲ್ಲ. ಈ ಎರಡು ಪ್ರಕರಣಗಳನ್ನೂ ಸಮಗ್ರವಾಗಿ ಸಿ.ಬಿ.ಐ.ಗೆ ಒಪ್ಪಿಸಿ ಎಂದು ಹೇಳುತ್ತೇನೆ. ನನಗೆ ಸಿ.ಓ.ಡಿ ಬಗ್ಗೆ ನಂಬಿಕೆ ಇಲ್ಲವೆಂದಲ್ಲ, ನನಗೆ ನಂಬಿಕೆ ಇದೆ. ನೀವು ಸಿಓಡಿಗಾದರೂ ವಹಿಸಿ. ತಕ್ಷಣವೇ ನೀವು ಕ್ರಮ ಕೈಗೊಳ್ಳಬೇಕು. ಇದು